# I Semester B.Sc./B.C.A. Examination, November/December 2009
## (Freshers Scheme)
## ಕನ್ನಡ ಭಾಷೆ – I
## ಸಾಹಿತ್ಯ ಸಂವಾದ – I

ಸಮಯ : 3 ಗಂಟೆಗಳು ಗರಿಷ್ಠ ಅಂಕಗಳು : 90

### ಭಾಗ – ೧

I. 1) **ಐದು** ಪದಗಳಿಗೆ ಅರ್ಥ ಬರೆಯಿರಿ : **(5×1=5)**

ಗೇಹ, ಶಿರ, ಹಜಾರ, ಹೆಣಗು, ವ್ಯಾಕುಳ, ಅಮಲು, ಸೊಣಗ.

2) **ಐದು** ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ : **(5×1=5)**

ಮಾರಿ, ಸೀಮೆ, ಕಲೆ, ವರ್ಣ, ತ್ರಾಸು, ಕಾಡು, ಹಿಗ್ಗು.

3) ಯಾವುದಾದರೂ **ಐದು** ಅನುಕರಣ ಪದಗಳನ್ನು ಬರೆಯಿರಿ : **(5×1=5)**

4) **ಐದು** ಪದಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ : **(5×1=5)**

ಬೆನ್ನಟ್ಟು, ಮೈದೋರು, ಮಸಿಬಳಿ, ಬಾಯಿಬಿಡು, ಕಾಲುಕೀಳು, ಉರಿದು ಬೀಳು, ಕೈಹಿಡಿ.

5) **ನಾಲ್ಕು** ಪದಗಳಿಗೆ ಮೂಲರೂಪವನ್ನು ಸೂಚಿಸಿ. **(4×1=4)**

ಹೆಣ್ಣು, ನವುಲು, ಮನುಗು, ಸ್ಟೇಷನ್ನು, ಇರಿಬೆ.

6) **ಎರಡು** ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ. **(2×3=6)**

1) ಮಾತು ಮನೆ ಕೆಡಿಸಿತು ತೂತು ಒಲೆ ಕೆಡಿಸಿತು.
2) ನೂಲಿನಂತೆ ಸೀರೆ ತಾಯಿಯಂತೆ ಮಗಳು.
3) ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು.

### ಭಾಗ – ೨

II. **ನಾಲ್ಕು** ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. **(4×5=20)**

1) ಜೀವಜಾಲದ ಮೇಲೆ 'ಬೆಳಗು' ಉಂಟುಮಾಡುವ ಪರಿಣಾಮವೇನು ?

2) ರೈತನ ಅಧಃ ಪತನಕ್ಕೆ ಕಾರಣವೇನು ?

P.T.O.

3) ಕವಿ ಹಾಗೂ ಕಾವ್ಯವನ್ನು ಕುರಿತು ಶ್ರೀವಿಜಯನ ಅಭಿಪ್ರಾಯಗಳೇನು ?

4) 'ರೈಲ್ವೆ ನಿಲ್ದಾಣದಲ್ಲಿ'ನ ಚಟುವಟಿಕೆಗಳು ಕವನದ ಧ್ವನಿಗೆ ಪೂರಕವಾಗಿದೆ. ಹೇಗೆ ?

5) 'ಸಂಪರ್ಕ' ಕವಿತೆಯ ಆಶಯವೇನು ?

6) ಪುರುಷಾಧಿಕಾರದ ನೆಲೆಗಳು 'ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ' ಕವಿತೆಯಲ್ಲಿ ಹೇಗೆ ಮೂಡಿ ಬಂದಿದೆ ?

## ಭಾಗ – ೩

III. **ಎರಡು** ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ. **(2×10=20**

1) ಬೇಂದ್ರೆಯವರ ಬೆಳಗಿನ ಅನುಭವವನ್ನು ಕುರಿತು ಬರೆಯಿರಿ.

2) ದೆವ್ವ ಪಿಶಾಚಿಗಳನ್ನು ಕುರಿತ ನಂಬಿಕೆಗಳ ಹಿನ್ನೆಲೆಯಲ್ಲಿ 'ಕುಕ್ಕುಟ ಪಿಶಾಚ' ಪಠ್ಯ ವ್ಯಕ್ತಪಡಿಸುವ ವಿಚಾರಗಳೇನು ?

3) ಬಡತನದ ಯಾತನೆಯ ಅರಿವೇ ಇಲ್ಲದ ಸಾಕವ್ವನ ಹಟ್ಟಿಯ ಬದುಕನ್ನು ಪರಿಚಯಿಸಿ.

4) ತಾವು ಬರೆಯುವುದಕ್ಕೆ ಯಶವಂತ ಚಿತ್ತಾಲರು ಕೊಡುವ ಕಾರಣಗಳೇನು ?

## ಭಾಗ – ೪

IV. **ಎರಡು** ಪ್ರಶ್ನೆಗಳಿಗೆ ಸ್ವಂತ ಆಲೋಚನೆಯ ಹಿನ್ನೆಲೆಯಲ್ಲಿ ಉತ್ತರಿಸಿ. **(2×10=20**

1) ದುರಾಸೆ ಹಾಗೂ ದುರಂತಗಳು ಸಂಗಾತಿಗಳೆಂಬುದನ್ನು 'ಮರಿಪಿಶಾಚಿ ಮತ್ತು ರೈತ' ಪಠ್ಯದ ನೆರವಿನಿಂದ ವಿಚಾರಮಾಡಿ.

2) ಕನ್ನಡ ಭಾಷೆ ಅನ್ಯಭಾಷೆಗಳ ಸ್ವೀಕರಣಗಳಿಂದ ಬೆಳೆಯುತ್ತದೆ–ಬಿಎಂಶ್ರೀ ಅವರ ಈ ಅಭಿಪ್ರಾಯವನ್ನು ನಿಮ್ಮ ವಿಚಾರಗಳೊಂದಿಗೆ ನಿರೂಪಿಸಿ.

3) 'ಏಕೀಕರಣ' ನಾಟಕದ ಶೀರ್ಷಿಕೆಯಲ್ಲೇ ಒಂದು ವ್ಯಂಗ್ಯ ಅಡಗಿದೆ–ಹೇಗೆ ?

4) ಹೆಣ್ಣಿನ ದಿಟ್ಟತನ ಹಾಗೂ ಸ್ವಾಭಿಮಾನ ಮಣಿಮಂಜರಿಯ ಕತೆಯಲ್ಲಿ ಹೇಗೆ ವ್ಯಕ್ತವಾಗಿದೆ ?

---

# I Semester B.Sc. Examination, November/December 2009
## (Semester Scheme) (Repeaters)
## ಕನ್ನಡ ಭಾಷೆ (ಭಾಗ – 1)
## ಪತ್ರಿಕೆ – 1 : ಪ್ರಾಚೀನ ಕಾವ್ಯಧಾರೆ ಮತ್ತು ಪ್ರಬಂಧ

ಸಮಯ : 3 ಗಂಟೆಗಳು                                                                 ಗರಿಷ್ಠ ಅಂಕಗಳು : 90

I. ಅ) ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ. (1×5=5)

1) ಕೊಟ್ಟ ಕುದುರೆಯನೇರಲರಿಯದೆ
ಮತ್ತೊಂದು ಕುದುರೆಯ ಬಯಸುವವರು
ವೀರರೂ ಅಲ್ಲ! ಧೀರರೂ ಅಲ್ಲ!!
ಇದು ಕಾರಣ
ನೆರೆ ಮೂರು ಲೋಕವೆಲ್ಲವೂ
ಹಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ
ಗುಹೇಶ್ವರ ಲಿಂಗವನವರೆತ್ತ ಬಲ್ಲರೋ ?

2) ವಿಷವಿಕ್ಕಿದವಗೆ ಷಡ್ರಸವನುಣಿಸಲಿಬೇಕು
ದ್ವೇಷ ಮಾಡಿದವನ ಪೋಷಿಸಲಿಬೇಕು
ಪುಸಿ ಮಾಡಿ ಕೆಡಿಸುವನ ಹಾಡಿ ಹರಸಲಿಬೇಕು
ಮೋಸ ಮಾಡುವನ ಹೆಸರು ಮಗನಿಗಿಡಬೇಕು.

ಆ) ಎರಡನ್ನು ಸಂದರ್ಭ ಸಹಿತ ವಿವರಿಸಿ. (2×3=6)

1) ತರಣಿಯ ಮುಂದೆ ಚಂದ್ರಮನ ಪ್ರಕಾಶವೆ
2) ಪಂಚೇಂದ್ರಿಯಗಳೊಳು ನಾಲ್ಕಧಮವೊಂದಧಿಕವೇ
3) ತನ್ನ ನೂಲು ತನ್ನನೇ ಸುತ್ತಿ ಸುತ್ತಿ ಸಾವ ತೆರನಂತೆ
4) ಪೆಂಡಿರ್ ಪೆಂಡಿರೊಳದೆಂತು ಬೆರಸುವರಬಲೇ

ಇ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ : (2×2=4)

1) ರಾಘವಾಂಕ
2) ಚಂಪೂ
3) ಸಾಲ್ವಲ
4) ಪುರಂದರ ದಾಸರು.

ಈ) ಈ ಗದ್ಯ ಭಾಗವನ್ನು ಹೊಸಗನ್ನಡಕ್ಕೆ ಪರಿವರ್ತಿಸಿ. 5

ಒಂದು ದಿವಸಂ ವಿಷ್ಣು ಪೊಟಿಲೊಳ್ ಗೋಸಣೆಯಂ
ತೊಟಿಲ್ಚಿದನಾವನೋರ್ವಂ ಪೌದನಪುರಾಧಿ ಪತಿಯಪ್ಪ ಪರಾಜಿತನಂ
ಸಂಗ್ರಾಮದೊಳ್ ಕಾದಿ ಗೆಲ್ದು ಪಿಡಿಕೊಂಡು ಬರ್ಕುಮಾತಂಗೆಯಾತನ
ಬೇಡುವುದೆಲ್ಲಮಂ ಕುಡುವೆನೆಂದು ತೊಟಿಲ್ವ ಗೋಸಣೆಯಂ
ಗಜಕುಮಾರಂ ಪಿಡಿದೊಡಾಮಾತನರಸಂ ಕೇಳ್ದು ಗಜಕುಮಾರನಂ
ಕರೆಯಿಸಿಯಾತನೊಡನೆ ಚಾತುರ್ದಂತ ಬಳಮಂ ಕೂಡಿಯಟ್ಟಿದೊಡಾತನುಂ
ಪೋಗಿಯಪರಾಜಿತನೊಡನೆ ಮಹಾಯುದ್ಧಂಗೆಯ್ದು ಗೆಲ್ದು ಪೆಡಂಗೆಯ್ಯುಡಿಯೆ
ಕಟ್ಟಿ ಗಜತುರಗವಸ್ತು ವಾಹನ ಸಹಿತಂ ತಂದು ವಿಷ್ಣುಗೊಪ್ಪಿಸಿದನ್.

II. ನಾಲ್ಕಕ್ಕೆ ಸಂಕ್ಷಿಪ್ತ ಉತ್ತರ ಬರೆಯಿರಿ. (4×5=20

1) ಶಂತನು ಸತ್ಯವತಿಯನ್ನು ಮದುವೆಯಾದ ಪ್ರಸಂಗವನ್ನು ವಿವರಿಸಿ.

2) ಸ್ತುತಿ-ನಿಂದೆಗಳನ್ನು ಕುರಿತ ಅಕ್ಕಮಹಾದೇವಿಯ ಅಭಿಮತವೇನು ?

3) ಪುಣ್ಯಕೋಟಿ ತನ್ನ ಒಡಹುಟ್ಟಿದವರಲ್ಲಿ ಬೇಡಿಕೊಂಡದ್ದು ಏನನ್ನು ?

4) ಅಲ್ಲಮನ ದೃಷ್ಟಿಯಲ್ಲಿ ಮಾಯೆ ಯಾವುದು ?

5) ಕಿರಾತ ಮತ್ತು ಅರ್ಜುನರ ಯುದ್ಧವನ್ನು ವಿವರಿಸಿ.

6) ಮಾಯದಬಲೆಯರ ಮೈ ಬಣ್ಣವನ್ನು ರಾಘವಾಂಕ ಹೇಗೆ ವರ್ಣಿಸಿದ್ದಾನೆ ?

III. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರಗಳನ್ನು ಬರೆಯಿರಿ. (2×10=20

1) ಭೀಷ್ಮನ ವ್ಯಕ್ತಿತ್ವದ ಹಿರಿಮೆಯನ್ನು ಪಂಪ ಹೇಗೆ ಚಿತ್ರಿಸಿದ್ದಾನೆ ?

2) ಭರತನ ಗರ್ವವು ನಾಶವಾದ ಬಗೆಯನ್ನು ವಿವರಿಸಿ.

3) ಗಾಣರಾಣಿಯರ ಕೋರಿಕೆಯೇನು ? ಅದನ್ನು ಹರಿಶ್ಚಂದ್ರ ತಿರಸ್ಕರಿಸಿದ ರೀತಿಯನ್ನು ವಿವರಿಸಿ.

4) ಪರಮ ಸಾತ್ವಿಕತೆಯ ಎದುರು ತಮೋಗುಣ ಸೋಲುತ್ತದೆ-'ಪುಣ್ಯ ಕೋಟಿ' ಜನಪದ ಗೀತೆ ಹೇಗೆ ಬಿಂಬಿಸಿದೆ ?

IV. ಐದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. (5×1=5

1) 'ಆರೆಂಜ್ ಕ್ಲಬ್' ಎಂದರೇನು ?

2) 'ಐದು ರೂಪಾಯಿ ಪರೀಕ್ಷೆಯ' ಕ್ಲಾಸಿನಲ್ಲಿ ಓದುತ್ತಿದ್ದವರು ಯಾರು ?

3) ಎ.ಎನ್. ಮೂರ್ತಿರಾಯರ ಹೆಸರಿನಲ್ಲಿನ 'ಎ ಮತ್ತು ಎನ್' ಏನನ್ನು ಸೂಚಿಸುತ್ತದೆ ?

4) ರಾತ್ರಿಯ ಸಮಯದಲ್ಲಿ ಮಕ್ಕಳಿಗೆ ಯಾರು ಕಥೆ ಹೇಳುತ್ತಿದ್ದರು ?

5) ಹಿರಿಯರು ಎಲ್ಲಿಗೆ ಹೋಗುವುದನ್ನು ಪಂಚಮಹಾಪಾತಕಗಳಲ್ಲಿ ಒಂದೆಂದು ಭಾವಿಸಿದ್ದರು ?

6) 'ಮಾಣಿ' ಎಂಬ ಪದ ಯಾವುದರಿಂದ ಬಂದಿದೆ ?

7) ದಿವಾನಖಾನೆಗೆ ಹಚ್ಚಿಸಿದ ಬಣ್ಣ ಯಾವುದು ?

V. ಒಂದು ವಿಷಯದ ಬಗ್ಗೆ ಸಂಕ್ಷಿಪ್ತವಾಗಿ ಉತ್ತರಿಸಿ. (1×5=5

1) ಲಲಿತ ಇಂಗ್ಲಿಷ್ ಕಲಿತದ್ದು

2) ಕಲ್ಯಾಣಿದಾಸ.

VI. ಎರಡು ಪ್ರಶ್ನೆಗಳಿಗೆ ಉತ್ತರಿಸಿ. (2×10=20

1) ಮಹಾರಾಜಾ ಕಾಲೇಜಿನ 'ಕಾಮನ್ ರೂಮ್'ನ ವೈಶಿಷ್ಟ್ಯ ಮತ್ತು ಸಾಧನೆಗಳನ್ನು ಪರಿಚಯಿಸಿ.

2) ಪ್ರಬಂಧಕಾರರ ಬಹಳ ವರ್ಷಗಳ ನಂತರದ 'ಅಕ್ಕಿ ಹೆಬ್ಬಾಳಿ'ನ ಭೇಟಿ ಆತ್ಮೀಯವೆನಿಸದಿರಲು ಕಾರಣವೇನು ? ವಿವರಿಸಿ.

3) ಗೌರಜ್ಜಿಯ ವ್ಯಕ್ತಿತ್ವವನ್ನು ಪರಿಚಯಿಸಿ.

4) 'ಹಗಲುಗನಸುಗಳನ್ನು ಕಾಣುವವನಷ್ಟು ಸುಖಿ ಮತ್ತಾರೂ ಇಲ್ಲ'. ಹೇಗೆ ? ವಿಶದಪಡಿಸಿ.

---